# ವೈದ್ಯಕೀಯ ಜ್ಞಾನ ಹೆಚ್ಚಿಸಿದ ಆರೋಗ್ಯ ದಸರಾ

## ಮೊದಲ ಬಾರಿಗೆ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯಕೀಯ ವಸ್ತುಪ್ರದರ್ಶನ | ಆರೋಗ್ಯ ಸಚಿವ ಸುಧಾಕರ್ ಚಾಲನೆ





ಆರೋಗ್ಯ ದಸರಾ ಮತ್ತು ವೈದ್ಯಕೀಯ ವಸ್ತು ಪ್ರದರ್ಶನವನ್ನು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಉದ್ಘಾಟಿಸಿ, ವೀಕ್ಷಿಸಿದರು. ಸಚಿವ ಎಸ್.ಟಿ.ಎಸ್ ಇದ್ದರು.

ಮೈಸೂರಿನಲ್ಲಿ ಇತ್ತೀಚೆಗೆ ಉದ್ಘಾಟನೆಯಾಗಿರುವ ಟ್ರಾಮಾ ಸೆಂಟರ್‌ಗೆ ತಾಂತ್ರಿಕ ಕಾರಣದಿಂದ ಸಿಬ್ಬಂದಿ ಹಾಗೂ ವೈದ್ಯರನ್ನು ನೇಮಿಸಲು ತಡವಾಗಿದೆ. 255 ಪೋಸ್ಟ್‌ಗಳಿಗೆ ಮಂಜೂರಾತಿ ಸಿಕ್ಕಿದೆ. ಎರಡು ಮೂರು ತಿಂಗಳಲ್ಲಿ ವೈದ್ಯಕೀಯ ಸಿಬ್ಬಂದಿ ನೇಮಕ ಪೂರ್ಣಗೊಂಡು, ಜನರ ಸೇವೆಗೆ ಒದಗಲಿದೆ.

- **ಡಾ.ಕೆ. ಸುಧಾಕರ್**, ಸಚಿವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

### ಜಿಲ್ಲೆಯಲ್ಲಿ ಮೂಲಸೌಕರ್ಯಗಳು ಅಭಿವೃದ್ಧಿ

ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ದಸರಾದಲ್ಲೂ ಆಗಬೇಕು

ಆರೋಗ್ಯ ಸಮಸ್ಯೆ ಬಗ್ಗೆ ಮತ್ತು ದೇಹ ರಚನೆ ಬಗ್ಗೆ ಅರಿವು ಮೂಡಿಸಲು ವೈದ್ಯಕೀಯ ವಸ್ತುಪ್ರದರ್ಶನ

ಆಂದೋಲನ

### ವೈದ್ಯಕೀಯ ಕಾಲೇಜಿನಲ್ಲಿ ಆರೋಗ್ಯ ದಸರಾ ವಸ್ತುಪ್ರದರ್ಶನ

# ನಿರ್ಜೀವ ದೇಹದ ಅಂಗಾಂಗ ನೋಡಿ ಹೌಹಾರಿದರು!

ಮೈಸೂರು: ನೀರು ತುಂಬಿದ ತಲೆ ಬುರುಡೆ, ಥಾಲಿಡೋಮೈಡ್ ಬೇಬಿ, ಸೀಳು ತುಟಿ ಮತ್ತು ಅಂಗಗಳು, ಅವಳಿ ಮಕ್ಕಳು, ಹುಟ್ಟಿನಿಂದ ಬಂದಿರುವ ವೈಪರೀತ್ಯಗಳಿಗೆ ಕಾರಣ, ಜಠರದ ಹುಣ್ಣು, ಕರುಳಿನ ಕ್ಯಾನ್ಸರ್, ಯಕೃತ್ತಿನಲ್ಲಿ ಉಂಟಾಗುವ ಸಮಸ್ಯೆಗಳು... ಹೀಗೆ ದೇಹದ ಒಂದೊಂದು ಅಂಗಾಗಗಳನ್ನೂ ನೋಡುತ್ತಿದ್ದರೆ ಹೃದಯ ಬಡಿತ ಹೆಚ್ಚಾಗುತ್ತದೆ. ಜೀವ ಇಲ್ಲದ ದೇಹ ಹೇಗಿರುತ್ತದೆ ಎನ್ನುವ ಚಿಂತೆಗೀಡು ಮಾಡುತ್ತದೆ. ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಅನಾಟಮಿ (ಅಂಗರಚನಾ ವಿಭಾಗ)ದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಪ್ರಥಮ ಬಾರಿಗೆ ಆಯೋಜಿಸಿರುವ ಆರೋಗ್ಯ ದಸರಾ ವಸ್ತು ಪ್ರದರ್ಶನ ನೋಡುಗರಲ್ಲಿ ಕುತೂಹಲ ಮೂಡುವಂತೆ ಮಾಡಿದೆ. ಶ್ವಾಸಕೋಶದ ಕ್ಯಾನ್ಸರ್, ಟಿ.ಬಿ.ಕ್ಯಾನ್ಸರ್, ಅಂಡಾಶಯದ ಕ್ಯಾನ್ಸರ್, ಗರ್ಭಾಶಯದ ಫೈಬ್ರಾಯ್ಡ್, ಬ್ರೈನ್, ಶಿಶ್ನದ ಕ್ಯಾನ್ಸರ್‌ಗೆ ಒಳಗಾದ ಅಂಗಾಂಗಗಳನ್ನು ಪ್ರದರ್ಶನಕ್ಕಿಡಲಾಗಿದೆ.

ವೈದ್ಯಕೀಯ ವಿದ್ಯಾರ್ಥಿಗಳು ಮೃತಪಟ್ಟ ವ್ಯಕ್ತಿಯ ದೇಹದ ಭಾಗಗಳನ್ನು ಬಳಸಿ ಆರೋಗ್ಯ ಮಾಹಿತಿ ನೀಡುತ್ತಿದ್ದರು. ವಸ್ತು ಪ್ರದರ್ಶನಕ್ಕೆ ಆಗಮಿಸಿದವರು ತದೇಕಚಿತ್ತದಿಂದ ಆಲಿಸುತ್ತಿದ್ದರು. ದೇಹದ ರಚನೆ ಹೇಗಿರುತ್ತದೆ? ಕಾಯಿಲೆ ಬಂದಾಗ ಯಾವ ರೀತಿ ಇರುತ್ತದೆ? ಎನ್ನುವುದನ್ನು ಸಾಕ್ಷೀಕರಿಸುವ ಅಂಗಾಂಗಗಳನ್ನು ಸಾರ್ವಜನಿಕರಿಗೆ ಪ್ರದರ್ಶಿಸಲಾಯಿತು.

ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರು ವೈದ್ಯಕೀಯ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿದರು. ಶಾಸಕ ಎಲ್ .ನಾಗೇಂದ್ರ ಅಧ್ಯಕ್ಷತೆ ವಹಿಸಿದ್ದರು. ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕಿ ಡಾ.ಕೆ.ಆರ್. ದಾಕ್ಷಾಯಿಣಿ ಸ್ವಾಗತಿಸಿದರು. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ ಗೌಡ, ಮಹಾಪೌರ ಶಿವಕುಮಾರ್, ಉಪ ಮಹಾಪೌರರಾದ ಡಾ.ಜಿ.ರೂಪಾ, ಸದಸ್ಯೆ ಪ್ರಮೀಳಾ ಭರತ್, ಡಾ.ಜೆ.ಜಯಂತ್, ಡಾ.ರವಿ, ಡಾ.ಮೊಹಮ್ಮದ್ ಸಿರಾಜ್ ಅಹಮದ್, ಡಾ. ಚಿದಂಬರ, ಡಾ.ದಿನೇಶ್, ಡಾ.ನಂಜುಂಡಸ್ವಾಮಿ ಹಾಜರಿದ್ದರು. ಅ.5ರವರೆಗೆ ಪ್ರದರ್ಶನ ಇದ್ದು, ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯ ತನಕ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿರುತ್ತದೆ.




**ಸಾರ್ವಜನಿಕರು ವೈದ್ಯಕೀಯ ವಸ್ತು ಪ್ರದರ್ಶನವನ್ನು ವೀಕ್ಷಿಸಿ ಪ್ರಯೋಜನ ಪಡೆಯಬೇಕು. ಇದರಿಂದ ಜನಸಾಮನ್ಯರಿಗೆ ಆರೋಗ್ಯದ ಬಗ್ಗೆ ಜಾಗೃತಿ ಮೂಡಲಿದೆ. ಹಾಗೆಯೇ ಆರೋಗ್ಯ ಕಾಪಾಡುವಂತಹ ಪ್ರಮುಖ ಅಂಶಗಳನ್ನು ದೇಹದ ಅಂಗಾಂಗಗಳ ಮೂಲಕವೇ ವಿವರಿಸಲಾಗುತ್ತದೆ. ಇದಕ್ಕೆ ದೇಹ ದಾನದ ಪ್ರಯೋಜನಗಳನ್ನು ತಿಳಿಸಿಕೊಡಲಾಗುತ್ತದೆ.**

**-ಡಾ.ಕೆ.ಸುಧಾಕರ್**, ವೈದ್ಯಕೀಯ ಶಿಕ್ಷಣ ಸಚಿವರು.

# ಆರೋಗ್ಯ ದಸರಾ ವೈದ್ಯಕೀಯ ವಸ್ತುಪ್ರದರ್ಶನ

## ಕೋವಿಡ್ ಹಿನ್ನೆಲೆಯಲ್ಲಿ ಅರಿವು ಮೂಡಿಸಲು ಆರೋಗ್ಯ ದಸರಾ: ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್

• **ಬಿ. ಶೇಖರ್ ಗೋಪಿನಾಥಂ**

**ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು ಜಿಲ್ಲಾಡಳಿತ, ಜಿಪಂ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಇದೇ ಮೊದಲ ಬಾರಿಗೆ ಆಯೋಜಿರುವ ಆರೋಗ್ಯ ದಸರಾ ವೈದ್ಯಕೀಯ ವಸ್ತುಪ್ರದರ್ಶನವನ್ನು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಮಂಗಳವಾರ ಉದ್ಘಾಟಿಸಿದರು.

ಈ ವೇಳೆ ಸಚಿವ ಡಾ.ಕೆ. ಸುಧಾಕರ್ ಮಾತನಾಡಿ, ದಸರಾ ಮಹೋತ್ಸವ ಸಂದರ್ಭದಲ್ಲಿ ಮೊದಲ ಬಾರಿಗೆ ಆರೋಗ್ಯ ದಸರಾ ವೈದ್ಯಕೀಯ ವಸ್ತು ಪ್ರದರ್ಶನ ಆಯೋಜಿಸಲಾಗಿದೆ, ಸಾರ್ವಜನಿಕರು ವೀಕ್ಷಿಸಿ ಇದರ ಪ್ರಯೋಜನ ಪಡೆಯಬೇಕು. ಇದರಿಂದ ಜನಸಾಮನ್ಯರಿಗೆ ಆರೋಗ್ಯದ ಬಗ್ಗೆ ಜಾಗೃತಿ ಮೂಡಲಿದೆ ಎಂದು ಹೇಳಿದರು.

ಆರೋಗ್ಯ ಕಾಪಾಡುವಂತಹ ಪ್ರಮುಖ ಅಂಶಗಳನ್ನು ದೇಹದ ಅಂಗಾಂಗಗಳ ಮೂಲಕವೇ ವಿವರಿಸಲಾಗುತ್ತದೆ. ಇದಕ್ಕೆ ದೇಹ ದಾನದ ಪ್ರಯೋಜನಗಳನ್ನು ತಿಳಿಸಿಕೊಡಲಾಗುತ್ತದೆ. ಆರೋಗ್ಯ ದಸರಾ ಎಂಬ ಆಲೋಚನೆ ಕೋವಿಡ್ ಎಂಬ ಸಂಕಷ್ಟದ ಕಾಲದಿಂದ ಅನುಭವಿಸಿದ ಸಮಸ್ಯೆ ಮತ್ತು ಸವಾಲುಗಳಿಂದ ಬಂದಿದೆ. ಈ ಆರೋಗ್ಯ ದಸರಾ ಏರ್ಪಡಿಸಿ ಜನರಿಗೆ ಆರೋಗ್ಯದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದು ಅವರು ತಿಳಿಸಿದರು. ಸಹಕಾರ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಶಾಸಕ ಎಲ್. ನಾಗೇಂದ್ರ, ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ಜಿ. ರೂಪ, ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಎನ್‌ಆರ್‌ಎಚ್‌ಎಂ ಎಂಡಿ ಡಾ. ಅರುಂಧತಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಎಚ್. ಪ್ರಸಾದ್, ಮೈಸೂರು ವೈದ್ಯಕೀಯ ಕಾಲೇಜು ನಿರ್ದೇಶಕಿ ಮತ್ತು ಡೀನ್ ಡಾ.ಕೆ.ಆರ್. ದಾಕ್ಷಾಯಿಣಿ ಮೊದಲಾದವರು ಇದ್ದರು.



ಮೈಸೂರು ವೈದ್ಯಕೀಯ ಕಾಲೇಜಿನಲ್ಲಿ ಆಯೋಜಿಸಲಾಗಿರುವ ಆರೋಗ್ಯ ದಸರಾ ವೈದ್ಯಕೀಯ ವಸ್ತುಪ್ರದರ್ಶನವನ್ನು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಮಂಗಳವಾರ ಉದ್ಘಾಟಿಸಿ ವೀಕ್ಷಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಶಾಸಕ ಎಲ್. ನಾಗೇಂದ್ರ ಇದ್ದರು.

### ಮನುಷ್ಯನ ಮೂಳೆಗಳಿಂದ ವೆಲ್‌ಕಮ್!

ವೈದ್ಯಕೀಯ ವಸ್ತುಪ್ರದರ್ಶನಕ್ಕೆ ಪ್ರವೇಶಿಸುತ್ತಿದ್ದಂತೆ ಮನುಷ್ಯನ ಮೂಳೆಗಳಿಂದ ಇಂಗ್ಲಿಷ್‌ನಲ್ಲಿ ವೆಲ್‌ಕಮ್, ಅಸ್ಥಿಪಂಜರಗಳು ಕಾಣ ಸಿಗುತ್ತವೆ. ಧೂಮಪಾನ ಮದ್ಯಪಾನ ಮತ್ತು ಮಾದಕ ವಸ್ತುಗಳನ್ನು ತ್ಯಜಿಸಿ ಎಂಬ ಸಂದೇಶದ ಅಕ್ಷರವನ್ನು ಮೂಳೆಗಳಲ್ಲೇ ಜೋಡಿಸಲಾಗಿದೆ.

ಭ್ರೂಣ ಬೆಳವಣಿಗೆ, ಗರ್ಭಕೋಶದಲ್ಲಿ ಭ್ರೂಣ, ಭ್ರೂಣ ಮತ್ತು ಜರಾಯು, ಆರೋಗ್ಯವಂತ ಭ್ರೂಣ, ಭ್ರೂಣದಲ್ಲಿ ವಿವಿಧ ಸಮಸ್ಯೆಗಳ ಚಿತ್ರಣ, ಮೆದುಳು ಮತ್ತು ಮೆದುಳು ಬಳ್ಳಿ, ಬ್ರೈನ್ ಟ್ಯೂ ಮರ್, ಹೃದಯ, ನೀರು ತುಂಬಿದ ತಲೆ ಬುರುಡೆ, ಸೀಳು ತುಟಿ ಮತ್ತು ಅಂಗಗಳು, ಅವಳಿ ಮಕ್ಕಳು, ಹುಟ್ಟಿನಿಂದ ಬಂದಿರುವ ವೈಪರೀತ್ಯಗಳಿಗೆ ಕಾರಣ, ಜಠರದ ಹುಣ್ಣು, ಕರುಳಿನ ಕ್ಯಾನ್ಸರ್, ಯಕೃತ್ತಿನಲ್ಲಿ ಉಂಟಾಗುವ ಸಮಸ್ಯೆಗಳು, ಶ್ವಾಸಕೋಶದ ಕ್ಯಾನ್ಸರ್, ಟಿಬಿ ಕ್ಯಾನ್ಸರ್, ಅಂಡಾಶಯದ ಕ್ಯಾನ್ಸರ್, ಗರ್ಭಾಶಯದ ಫೈಬ್ರಾಯ್ಡ್, ಬ್ರೈನ್, ಮೃತಪಟ್ಟ ವ್ಯಕ್ತಿಯ ದೇಹವನ್ನು ಪ್ರದರ್ಶಿಸಲಾಗಿದೆ.

ಈ ವೈದ್ಯಕೀಯ ವಸ್ತುಪ್ರದರ್ಶನ ಅ.5 ರವರೆಗೆ ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿರುತ್ತದೆ. ಈ ವೈದ್ಯಕೀಯ ವಸ್ತುಪ್ರದರ್ಶನವು ಮನುಷ್ಯನ ಹುಟ್ಟಿನಿಂದ ಸಾವಿನವರೆಗೆ ಎದುರಿಸುವ ಹಲವಾರು ಅನಾರೋಗ್ಯ ಸಮಸ್ಯೆ ಬಿಚ್ಚಿಡುವುದರ ಮೂಲಕ ಆರೋಗ್ಯಕರ ಜೀವನ ಶೈಲಿಯನ್ನು ಅಳವಡಿಸಿಕೊಳ್ಳುವುದು ಸೇರಿದಂತೆ ಆರೋಗ್ಯದ ಬಗ್ಗೆ ಅರಿವು ಮೂಡಿಸುವಲ್ಲಿ ಯಶಸ್ವಿಯಾಗುತ್ತಿದೆ.

# ಟ್ರಾಮಾ ಕೇರ್ ಸೆಂಟರ್‌ಗೆ 255 ಹುದ್ದೆಗಳ ನೇಮಕಾತಿಗೆ ಮಂಜೂರಾತಿ

• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರು ವೈದ್ಯಕೀಯ ಕಾಲೇಜು ವ್ಯಾಪ್ತಿಯ ಟ್ರಾಮಾ ಕೇರ್ ಸೆಂಟರ್‌ಗೆ ಅಗತ್ಯವಿರುವ 255 ಹುದ್ದೆಗಳ ನೇಮಕಾತಿಗೆ ಮಂಜೂರಾತಿ ದೊರೆತಿದ್ದು, 2- 3 ತಿಂಗಳಲ್ಲಿ ಸಂಪೂರ್ಣವಾಗಿ ಜನರ ಸೇವೆಗೆ ಸಿದ್ಧಗೊಳ್ಳಲಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು ಜಿಲ್ಲಾಡಳಿತ, ಜಿಪಂ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಆಯೋಜಿರುವ ಆರೋಗ್ಯ ದಸರಾ ವೈದ್ಯಕೀಯ ವಸ್ತುಪ್ರದರ್ಶನವನ್ನು ಅವರು ಮಂಗಳವಾರ ಉದ್ಘಾಟಿಸಿ ಮಾತನಾಡಿದರು.

ಟ್ರಾಮಾ ಕೇರ್ ಸೆಂಟರ್‌ಗೆ ತಾಂತ್ರಿಕ ಕಾರಣಗಳಿಂದ ವೈದ್ಯಕೀಯ ಮತ್ತು ಸಿಬ್ಬಂದಿ ನೇಮಿಸಲು ಸಾಧ್ಯವಾಗಿರಲಿಲ್ಲ. ಆದರೆ, ಹಣಕಾಸು ಇಲಾಖೆಯು 255 ಹುದ್ದೆಗಳ ನೇಮಕಕ್ಕೆ ಮಂಜೂರಾತಿ ನೀಡಿರುವುದರಿಂದ ಇನ್ನೂ 2-3 ತಿಂಗಳಲ್ಲಿ ನೇಮಕಾತಿ ಪ್ರಕ್ರಿಯೆ ಮುಗಿಸಿ, ಪೂರ್ಣ ಪ್ರಮಾಣದಲ್ಲಿ ಸೇವೆ ಆರಂಭಿಸಲಾಗುವುದು ಎಂದರು.

**5 ಕೋಟಿ ಜನರಿಗೆ ಆರೋಗ್ಯ ಕಾರ್ಡ್:** ರಾಜ್ಯದಲ್ಲಿ ಆಯುಷ್ಮಾನ್ ಭಾರತ್- ಆರೋಗ್ಯ ಕರ್ನಾಟಕ ವಿಮಾ ಯೋಜನೆಯಡಿ 100 ದಿನಗಳಲ್ಲಿ 5 ಕೋಟಿ ಜನರಿಗೆ ಆರೋಗ್ಯ ಕಾರ್ಡ್ ನೀಡಲು ನಿರ್ಧರಿಸಿದ್ದು, ಇಡೀ ವಿಶ್ವದಲ್ಲೇ ಆರೋಗ್ಯ ವಿಮಾ ಚಿಕಿತ್ಸೆ ಬೇರೆಲ್ಲೂ ಇಲ್ಲ.

ಮೈಸೂರು ಜಿಲ್ಲೆಯಲ್ಲಿ ಖಾಸಗಿ ಆಸ್ಪತ್ರೆ ಮತ್ತು ಸರ್ಕಾರಿ ಆಸ್ಪತ್ರೆಗಳು ಸೇರಿದಂತೆ ₹ 118 ಕೋಟಿ ವಿಮೆ ಹಣ ಭರಿಸಲಾಗಿದೆ. ಕರ್ನಾಟಕದಲ್ಲಿ ನೂರು ದಿನಗಳಲ್ಲಿ 5 ಕೋಟಿ ಜನರಿಗೆ ವಿಮಾ ಕಾರ್ಡ್ ನೀಡಲಿದ್ದು, ಈಗಾಗಲೇ 15 ದಿನಗಳಲ್ಲಿ 85 ಲಕ್ಷ ಜನರಿಗೆ ವಿತರಿಸಲಾಗಿದೆ ಎಂದರು.

ಗ್ರಾಮಾಂತರ ಪ್ರದೇಶದಲ್ಲಿ ವೈದ್ಯರ ಕೊರತೆ ಇಲ್ಲ. ಜಿಲ್ಲೆಗೆ 131 ವೈದ್ಯರನ್ನು ಗ್ರಾಮೀಣ ಸೇವೆಗೆ ನಿಯೋಜಿಸಲಾಗಿದೆ. ಈಗಾಗಲೇ ಪ್ರಾಥಮಿಕ, ತಾಲೂಕು ಆಸ್ಪತ್ರೆಗಳಿಗೆ ನಿಯೋಜನೆ ಮಾಡಿರುವುದರಿಂದ ಎಲ್ಲಿಯೂ ಸಮಸ್ಯೆ ಇಲ್ಲ. ಕೊರೊನಾ ಕಾಲದಲ್ಲಿ ಕಲಿತ ಪಾಠದಿಂದಾಗಿ ಆರೋಗ್ಯ ಇಲಾಖೆಯಲ್ಲಿ ಸುಧಾರಣೆ ಕ್ರಮ ವಹಿಸಲಾಗಿದೆ ಎಂದು ಅವರು ತಿಳಿಸಿದರು.



ಆರೋಗ್ಯ ದಸರಾ ವೈದ್ಯಕೀಯ ವಸ್ತುಪ್ರದರ್ಶನವನ್ನು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಮಂಗಳವಾರ ಉದ್ಘಾಟಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಶಾಸಕ ಎಲ್. ನಾಗೇಂದ್ರ ಇದ್ದರು.